# <u>ವ್ಯಾಖ್ಯಾನ</u>

# <u>ಹೂವು ತರುವವರ ಮನೆಗೆ ಹುಲ್ಲು ತರುವ</u>

**Ref.**: Dasara Maatina Sobagu, by Dr. Vijayendra R Desai, page No. 134.

ಹೂವ ತರುವರ ಮನೆಗೆ ಹುಲ್ಲ ತರುವ
ಅವ್ವ ಲಕುಮೀ ರಮಣ ಇವಗಿಲ್ಲ ಗರುವ ॥ ಪ ॥

ಒಂದು ದಳ ಶ್ರೀ ತುಳಸಿ ಬಿಂದು ಗಂಗೋದಕವ
ಇಂದಿರಾ ರಮಣಗೆ ಅರ್ಪಿತವೆನ್ನುತ
ಒಂದೆ ಮನದಲಿ ಸಿಂಧು ಶಯನ ಮುಕುಂದ ಎನೆ
ಎಂದೆಂದು ವಾಸಿಪನಾ ಮಂದಿರದ ಒಳಗೆ ॥ 1 ॥

ಪರಿಪರಿಯ ಪುಷ್ಪಗಳ ಪರಮಾತ್ಮಗರ್ಪಿಸಿ
ಪರಿಪೂರ್ಣನೆಂದು ಪೂಜೆಯನು ಮಾಡೆ
ಸರಸಿಜಾಕ್ಷನು ತನ್ನ ಸಕಲ ಸ್ವಾತಂತ್ರ್ಯದಲಿ
ಸರಿ ಭಾಗ ಕೊಡುವ ತನ್ನ ಅರಮನೆಯ ಒಳಗೆ ॥ 2 ॥

ಪಾಂಡವರ ಮನೆಯೊಳಗೆ ಕುದುರೆಗಳ ತಾ ತೊಳೆದು
ಪುಂಡರೀಕಾಕ್ಷ ತಾ ಹುಲ್ಲ ತಂದ
ಅಂಡಜಾಧಿಪ ನಮ್ಮ ಪುರಂದರ ವಿಠ್ಠಲನು
ತೊಂಡರಿಗೆ ತೊಂಡನಾಗಿ ಸಂಚರಿಸುತಿಹನು ॥ 3 ॥

ಹೂವು ತರುವುದು - ಪೂಜೆಯ ಪ್ರತೀಕ. ಪರಮಾತ್ಮನ ಆರಾಧನೆಯ ಸಂಕೇತ. ಹುಲ್ಲು ಆಹಾರದ ಸೂಚಕ - ಅಶನ, ವಸನ, ವಸತಿ ಕೊಟ್ಟು ಭಗವಂತ, ಯೋಗಕ್ಷೇಮ ವಹಿಸಿಕೊಳ್ಳುವದರ ದ್ಯೋತಕ. ಆರಾಧಿಸಿದವರನ್ನು ಆರಕ್ಷಿಸುತ್ತಾನೆ ಪರಮಾತ್ಮ ಎಂಬುದು ತಾತ್ಪರ್ಯ.
ಒಂದು ದಳ ತುಳಸಿ, ಬಿಂದು ಗಂಗೋದಕ, ಪರಿಪರಿಯ ಪುಷ್ಪಗಳಿಂದ ಪರದೈವವನನ್ನು ಪೂಜಿಸಬೇಕು.
ಮಹಾತ್ಮೆ ತಿಳಿದು ಆರಾಧಿಸಿದರೆ ಹೆಚ್ಚು ಫಲ ದಾಯಕ
ಪರಿಪೂರ್ಣನಾದ ಫಣಿಶಯನನನ್ನು ಚೆನ್ನಾಗಿ ತಿಳಿಯ ಬೇಕು. ಆತ ಪೂರ್ಣನೆಂದರೆ ಅನಂತ

ಕಲ್ಯಾಣ ಗುಣ ಪರಿಪೂರ್ಣ.  ಇದರರ್ಥ ನಿರ್ದೋಷ.  ಅಂದರೆ ಆತ ಸರ್ವತಂತ್ರ ಸ್ವತಂತ್ರ.  ಅದರರ್ಥ ಆತ ಸರ್ವೋತ್ತಮ.

ಸೃಷ್ಟಿ – ಸ್ಥಿತಿ - ಲಯಾದಿ ಅಷ್ಟಕರ್ತತ್ವ ಆತನಿಗೇ ಉಂಟು.  ಆತ ವೇದಗಮ್ಯ.  ಇದೆಲ್ಲ ಅವನ ಮಹಾತ್ಮೆ ಎಂದೇ ತಿಳಿಯುವುದೇ.  ಇದೇ ಜಿಜ್ಞಾಸೆ, ಇದೇ ಹೂವು ತರುವದು.  ಇದನ್ನೇ ಪ್ರಥಮ ಬ್ರಹ್ಮ ಸೂತ್ರ ಸಾರಿತು.  ' ಓಂ ಅಥಾತೋ ಬ್ರಹ್ಮ ಜಿಜ್ಞಾಸಾ ಓಂ'

ತೊಳಲಿ ಬಳಲಿ ಭವದಲಿ ಬೆಂದಿದ್ದೀರಿ.

'ತದಲಂ ಬಹು ಲೋಕ ವಿಚಿಂನಯಾ' -  -                    ದ್ವಾದಶಸ್ತೋತ್ರ

ಸಾಕಿನ್ನು ಲೌಕಿಕ ! ಬೇಕಿಲ್ಲ ಹಾಳು ಹರಟೆ.  ಪರಮ ಪುರುಷಾರ್ಥದಾಯಕ, ಪುರುಷೋತ್ತಮನ ಚಿಂತನೆ ಮಾಡಿರಿ.  ಈಶ ಪದದಲ್ಲಿ ಮನ ತನ್ಮಯವಾಗಲಿ

ಯಾಕೆ ಭಗವಂತನ ಚಿಂತನೆ?  ಎಂದರೆ --

ಎಂದೂ ಮುಗಿಯದ ಸಂಸಾರ ಮುಗಿಸುತ್ತಾನೆ.

ಕಷ್ಟಗಳಿಗೆ ಕಡೆ ತನಕ ಪೂರ್ಣ ವಿರಾಮ ಹಾಕುತ್ತಾನೆ.

ಅನಂತ ಸ್ವರೂಪ ಸುಖದಲ್ಲಿ ಲೋಲಾಡಿಸುತ್ತಾನೆ.

ಸಾಕಲ್ಲ!  ಮತ್ತೇನು ಬೇಕು?

ಜ್ಞಾನ, ಭಕ್ತಿ, ವಿರಕ್ತಿ, ಶಮ, ದಮ, ನಿಷ್ಟೆ, ಸತ್ಯ, ತಪ, ಶರಣಾಗತಿ, ಈ ಎಂಟು - ಅಷ್ಟ ಭಾವ ಪುಷ್ಪಗಳಿಂದ ಪದ್ಮನಾಭನನ್ನು ಅಲಂಕರಿಸಿರಿ.  ಅರ್ಚಿಸಿರಿ.

ಇಂತು ಹೂವು ತರುವವರ - ಅರ್ಚಿಸುವವರ ಮನೆಗೆ

ಹುಲ್ಲು - ಶಾಶ್ವತ ಸ್ವರೂಪ ಸುಖ - ಮೋಕ್ಷವನ್ನೇ ಮನೆ ಬಾಗಿಲಿಗೆ ತರುವಾ.  ತನ್ನ ಅರಮನೆಯಲ್ಲಿ ಸರಿಭಾಗ ಮಾಡಿ ಕೊಡುವ.  ಇಂಥ ದಯಾಳು ಮತ್ತೊಬ್ಬನುಂಟೇ!

ಹಾಗೇ ಹೇಳುತ್ತ ಹೋಗಬೇಡಿ.  ಏನು ಪ್ರಮಾಣವಿದಕ್ಕೆ? ಎನ್ನಬೇಡಿ.

ಇತಿಹಾಸ ಉಂಟು.  ಪುರಾಣ ಉಂಟು.  ಹಿಂದಿನವರ ಅನುಭವ ಉಂಟು.  ದಾಖಲೆಗಳೆಲ್ಲ ಉಂಟು.

ತರಳ ಧ್ರುವ ರಾಯ, ಒಲಿಸಿದ ಪ್ರಲ್ಹಾದ ರಾಜರ ದೃಷ್ಟಾಂತಗಳುಂಟು.  ಹೂ ಏರಿಸಿ ಫಲ ಪಡೆದವರಿವರು.

ಮೃತ್ಯುವಿನ ದವಡೆಯಲ್ಲಿ ಸಿಕ್ಕಿದ್ದು ಮದಗಜ.  ಭಕ್ತಿಯಿಂದ ಏರಿಸಿದ್ದು ಒಂದು ಕಾಡು ಹೂವು. ಪಡೆದದ್ದು ಕಡೆಯಿಲ್ಲದ ಸುಖ - ಸದ್ಗತಿ.

ನಾರಾಯಣ ನಾಮದ ಹೂವು ಅರ್ಪಿಸಿ ಸದ್ಗತಿ ಪಡೆದ ಅಜಾಮಿಳ ಉಂಟು.

ಹನುಮಂತ ಏರಿಸಿ ಆರಾಧಿಸದಿದ್ದ ಯೋಗ್ಯ ಹೂವೇ ಉಳಯಲಿಲ್ಲ ಜಗದೋಳ್.  ಇಡೀ ಜಗವನ್ನೇ ಹೂವಾಗಿ ಅರ್ಪಿಸಿ ಆರಾಧಿಸುವ ಹನುಮಂತ ಬಲವಂತ ಧೀರ.  ಆತನ ಜ್ಞಾನ, ಭಕ್ತಿ, ವಿರಕ್ತಿ  ಪುಷ್ಪಗಳ ಪರಿಪರಿಯ ಸೇವೆಗೆ ಸಂತುಷ್ಟನಾದ ಶ್ರೀ ರಾಮ, ಆತನಿಗೆ ತನ್ನ ಶಾಶ್ವತ ಸುಖದಾಯಕ ಆಲಿಂಗನ ವನ್ನೇ ಕೊಟ್ಟ. ಬ್ರಹ್ಮ ಪಟ್ಟ ಕೊಟ್ಟ.

ಭಕ್ತಿ, ಶರಣಾಗತಿಯ ವೀಭಿಷಣನಿಗೆ ಚಿರಪಟ್ಟವನಿತ್ತ.

ನಂಬಿದ ಸುಗ್ರೀವ ಗೆದ್ದ.  ಶಬರಿ ಭಕ್ತಿಯಿಂದ ರಾಮನಿಗೆ ಸಮರ್ಪಿಸಿದ್ದು ಹೂ ಹಣ್ಣು.  ಪಡೆದದ್ದು ಕಡೆ

ತನಕ ರಾಮಪಾದಾಶ್ರಯವೆಂಬ ಹುಲ್ಲು.
ಆರಾಧಿಸಿದ, ಶಾಪದಿ ಶಿಲೆಯಾದ ಅಹಲ್ಯೆ ರಾಮನ ಪಾದ ಸ್ಪರ್ಶದಿ ಮರಳಿ ಬಾಲೆಯಾದಳು.
ಸೋಮಶೇಖರನ ಸಲಹೆಯಂತೆ ರಾಮ ಮಂತ್ರವ
ಜಪಿಸಿ ಆತನ ಭಾಮೆ ಪಾರ್ವತಿ ಉದ್ಧೃತಳಾದಳು.
ಹೂವಿನಿಂದ ಅಲಂಕರಿಸಿ ಬಾಲ ಕೃಷ್ಣನನ್ನು ಮುದ್ದು ಮಾಡಿದ ಗೋಪಿಯರು ಸದ್ಗತಿಯ ಪಡೆದರು.
ಆರಾಧಿಸಿದ ಸುಧಾಮನ ಅರಮನೆಯೊಳಿಟ್ಟು ಆದರಿಸಿದ.
ಗಂಧ ಕೊಟ್ಟು ಆರಾಧಿಸಿದ ಕುಬ್ಜೆ ನವಯುವತಿ ಯಾದಳು. ಕೃಷ್ಣನ ಸಂಗ ಪಡೆದಳು.
ಹೂವು ತಂದು ಆರಾಧಿಸಿದ ಪಾಂಡವರ ಹೂವಿನಂತೆ ಕಾಪಾಡಿದ ಕೃಷ್ಣ. ಅಷ್ಟೇ ಅಲ್ಲ. ಹೂವು ತಂದ ಪಾಂಡವರ ರಥದ ಕುದುರೆಗಳಿಗೆ ನಿಜ ಹುಲ್ಲು ಹಾಕಿ ಸಲುಹಿದಾ, ಲಕುಮೀರಮಣ ಶ್ರೀ ಕೃಷ್ಣ. ಇವಗೆ ಇಲ್ಲ ಒಂದಿಷ್ಟೂ ಗರುವ.
ಸದಾ ಭಕ್ತ್ಯಾದಿ ಹೂವು ಏರಿಸಿ ಆರಾಧಿಸುವ ಮಾನಿನಿಗೆ ಅಕ್ಷಯ ವಸ್ತ್ರವನ್ನು ಇತ್ತು ಮಾನವಾ ಕಾಯ್ದ.
ಶರಶಯ್ಯಾಶಾಹಿಯಾದ ಕುರುಕುಲ ಪಿತಾಮಹ ಭೀಷ್ಮ ' ವಿಷ್ಣುಸಹಸ್ರನಾಮ ' ವೆಂಬ ಸಾಸಿರ ಹೂವು ಸಾಕ್ಷಾತ್ ಕೃಷ್ಣನಿಗೆ ಏರಿಸಿದ. ತನ್ನ ತಪ್ಪುಗಳಿಗೆ ಕ್ಷಮೆ, ಕೃಷ್ಣನ ನಿಜ ದರ್ಶನ, ಸದ್ಗತಿ ರೂಪದ ಹುಲ್ಲು ಪಡೆದ.
ಹೀಗೆ ಜ್ಞಾನ ಭಕ್ತಿ ವಿರಕ್ತಿ ಎಂಬ ಹೂವು ತಂದು ಆರಾಧಸಿ, ಸದ್ಗತಿ, ಶಾಶ್ವತ ಸುಖ ಪಡೆದವರ ಪಟ್ಟಿ ಕೊನೆಯಿಲ್ಲದಂತೆ ಬೆಳೆಯುತ್ತ ಹೋಗುತ್ತದೆ.
ಮತ್ತೆ ಹೀಗೆ ಹೂವು ತರುವೆ ಭಾರ ಹೊತ್ತು 'ಯೋಗ ಕ್ಷೇಮಂ ವಹಾಮ್ಯಹಂ' ಎನ್ನುತ್ತಾನೆ ಶ್ರೀ ಕೃ ಷ್ಣ.
ಇಂತಹ ಹೂವು ತರುವವರ ಮನೆಗೆ ಹುಲ್ಲು ತರುವ, ಪುರುಂದರ ದಾಸಾಂತರ್ಗತ, ಮುಖ್ಯ ಪ್ರಾಣಾಂತರ್ಗತ, ಪುಂಡರೀಕಾಕ್ಷ ಪುರುಂದರ ವಿಠ್ಠಲ ಅಭಿನ್ನ ಲಕ್ಷ್ಮೀ ನರಸಿಂಹ ದೇವರಿಗೆ ಭಕ್ತಿಯ ಸಾಷ್ಟಾಂಗ ನಮಸ್ಕಾರಗಳೆಂಬ ಹೂವನ್ನು ಏರಿಸೋಣ. ಅರ್ಚಿಸೋಣ.
ದಾಸವರೇಣ್ಯ ಪುರುಂದರ ದಾಸರ ಆರಾಧನಾ ನಿಮಿತ್ತ ಹರಿಸ್ಮರಣೆ.

ಡಾ. ವಿಜಯೇಂದ್ರ ದೇಸಾಯಿ

ಶ್ರೀ ಕೃಷ್ಣಾರ್ಪಣಮಸ್ತು